ಕೆಲಸ ಏನು? ನಾನು ಇನ್ನೊಂದು ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ; ಅದೇನೆಂದರೆ ಡಿ.ಎಂ.ಎ ಅವರು ಪಂಚಾಯಿತಿಯಲ್ಲಿ ಕೆಲಸ ಮಾಡುವ ಬಿಲ್ ಕಲೆಕ್ಟರುಗಳಿಗೆ ಅವರು ಸೇರಿದ ಮೂರೇ ವರ್ಷದೊಳಗೆ ಅವರನ್ನು ಸೀನಿಯರ್ ಹೆಲ್ತ್ ಇನ್ಸ್‌ಪೆಕ್ಟರ್‌ಗಳನ್ನಾಗಿ ಮಾಡಿ ಪ್ರಮೋಷನ್ ಕೊಟ್ಟಿದ್ದಾರೆ. ಇದುವರೆಗೆ ನೂರಾರು ಜನರಿಗೆ ಪ್ರಮೋಷನ್ ಕೊಟ್ಟಿದ್ದಾರೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ತಮ್ಮ ಮೂಲಕ ಸಂಬಂಧಪಟ್ಟ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ :— ಮಾನ್ಯ ಅಧ್ಯಕ್ಷರೆ, ಇಂಥದ್ದು ಸ್ಪೆಸಿಫಿಕ್ ಆಗಿ ಇರೆಗ್ಯುಲ್ಯಾರಿಟೀಸ್ ಏನಾದರೂ ಇದ್ದರೆ ಅದನ್ನು ನಾನು ತನಿಖೆ ಮಾಡಿಸುತ್ತೇನೆ.

ಮೈಸೂರಿನ ರಸ್ತೆಗಳು ದುರಸ್ಥಿ ಬಗ್ಗೆ.

554(5183) Sri A.S. Guruswamy (Chamundeshwari) :— Will the Hon'ble Minister for Urban Development be pleased to state:

a) Has it come to the notice of the Government that there are no PWD roads, Corporation roads, Jilla and Grama panchayath roads are coming under the jurisdiction of Mysore City?

b) Is there any difference in the maintenance of roads between PWD and other departments? Has it come to the notice of the Government?

c) Is there any proposal before the Government to improve and maintain these roads by a single agency?

d) What are the actions taken by the Government in this regard?

SRI B.B. Chimmana katti (Minister for Urban Development) :—

a) P.W.D. Roads and Corporation Roads are coming under the jurisdiction of Mysore City, but not the Jilla Panchayath and Grama Panchayath Roads.

b), c) No, Such instance has come to the notice of Urban Development, Thus there is no proposal.

d) Does not arise.

ಶ್ರೀ ಎ.ಎನ್. ಗುಗುಸ್ವಾಮಿ :— ಮಾನ್ಯ ಅಧ್ಯಕ್ಷರೆ, ನಾನು ಪ್ರತಿನಿಧಿಸುವ ಚಾಮುಂಡೇಶ್ವರಿ ಕ್ಷೇತ್ರವು ಮೈಸೂರು ನಗರದ ಸುತ್ತ ಇರುವಂಥದ್ದಾಗಿದೆ. ಈ ಕ್ಷೇತ್ರದ ಸುತ್ತ ಮೈಸೂರು ನಗರದ ಕಾರ್ಪೋರೇಷನ್ ಲಿಮಿಟ್ ಎಲ್ಲಿಂದ ಎಲ್ಲಿಯವರೆಗೆ ಬರುತ್ತದೆ ಎನ್ನುವುದು ಇಲ್ಲಿಯವರೆಗೂ ಕೂಡ ನಿಗಧಿ ಆಗಿಲ್ಲ. ಲೋಕೋಪಯೋಗಿ ಇಲಾಖೆಗೆ ಸೇರಿದ ಸುಮಾರು 500 ರಿಂದ 600 ಕಿ.ಮೀ.ರಸ್ತೆ ಮೈಸೂರು ನಗರದೊಳಗಡೆ ಇದೆ. ಅದನ್ನು ಕಾರ್ಪೋರೇಷನ್ನಿನವರು ರಿಪೇರಿ ಮಾಡುತ್ತಿಲ್ಲ. ಆದರೆ ಮಾನ್ಯ ಸಚಿವರು ``All the P.W.D. Roads and Corporation Roads are coming under the jurisdiction of Mysore City" ಎನ್ನತಕ್ಕಂಥ ಉತ್ತರವನ್ನು ಕೊಟ್ಟಿದ್ದಾರೆ. ಇದು ಸತ್ಯಕ್ಕೆ ದೂರವಾದಂಥ ಮಾತು. ದಯವಿಟ್ಟು ರೆಕಾರ್ಡ್ನನ್ನು ಪರಿಶೀಲನೆ ಮಾಡಬೇಕು. There are 700 Kms. roads existing within the city. ಕಾರ್ಪೋರೇಷನ್‌ನವರು ಲೋಕೋಪಯೋಗಿ ಇಲಾಖೆಯವರು ಮಾಡಲಿ ಎಂದು ಹೇಳುತ್ತಾರೆ. ಲೋಕೋಪಯೋಗಿ ಇಲಾಖೆಯವರು ಕಾರ್ಪೋರೇಷನ್‌ನವರು ಮಾಡಲಿ ಎಂದು ಹೇಳುತ್ತಾರೆ, ಇದು ತಪ್ಪು. ದಯವಿಟ್ಟು ಮಾನ್ಯ ಸಚಿವರು ಇದರ ಬಗ್ಗೆ ಖಾತರಿಪಡಿಸಿಕೊಂಡು ಈ ರೀತಿಯ ಉತ್ತರ ಕೊಡುವ ಬದಲು ಖಚಿತವಾದ ಉತ್ತರವನ್ನು ಕೊಡತಕ್ಕಂಥದ್ದು ಸೂಕ್ತ ಎಂದು ನಾನು ಹೇಳುತ್ತಾ, ನನ್ನ ಕ್ಷೇತ್ರದಲ್ಲಿ ಬೋಗಾದಿ ಇಣಕಲ್ ಎನ್ನುವ ಗ್ರಾಮ ಬರುತ್ತದೆ. ಅಲ್ಲಿ ಸೇರುವಂಥ ರಸ್ತೆ ಅದು ಜಿಲ್ಲಾ ಪಂಚಾಯತ್ ರಸ್ತೆ ಆಗಿರುತ್ತದೆ. It comes within its jurisdiction. ಈ ರಸ್ತೆ ರಿಪೇರಿಯನ್ನು ಕೂಡ ಕಾರ್ಪೋರೇಷನ್ನಿನವರಾಗಲೀ ಅಥವಾ ಜಿಲ್ಲಾ ಪಂಚಾಯತ್‌ನವರೀಗಲೀ ಮಾಡುವುದಿಲ್ಲ. ಕಾರ್ಪೋರೇಷನ್ನಿನವರು ಈ ರಸ್ತೆ ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳುತ್ತಾರೆ. ಇದು ನಿಜ ಅಲ್ಲ. ಬೇಕಾದರೆ ನೀವು ಲೋಕೋಪಯೋಗಿ ಇಲಾಖೆಯಿಂದ ವರದಿ ತರಿಸಿ ನೋಡಿ.ಎನ್.ಓ.ಸಿ. ಎಷ್ಟು ಬಾಕಿ ಇದೆ., ಏಕೆ ರಸ್ತೆ ರಿಪೇರಿ ಮಾಡಿಸುತ್ತಿಲ್ಲ, ಎಷ್ಟು ಮಾಡಿಲ್ಲ ಇತ್ಯಾದಿ ತಮಗೆ ಗೊತ್ತಾಗುತ್ತದೆ. ಆದ್ದರಿಂದ, ಮಾನ್ಯ ಸಚಿವರು ಹಾರಿಕೆಯ ಉತ್ತರವನ್ನು ಕೊಡುವ ಬದಲು ಫ್ಯಾಕ್ಟ್ಸ್ ಏನಿದೆ ಅದನ್ನು ನೋಡಿ ಉತ್ತರ ಕೊಡಬೇಕು. Facts are existing before us. ದಯವಿಟ್ಟು ಕಾರ್ಪೋರೇಷನ್ ಲಿಮಿಟ್‌ಗೆ ಫಿಕ್ಸ್ ಆಗದೇ ಇರತಕ್ಕಂಥ ಎಲ್ಲಾ ರಸ್ತೆಗಳನ್ನು ರಿಪೇರಿ ಮಾಡಿಸುವುದಕ್ಕೆ ಒಂದೇ ಏಜೆನ್ಸಿ ಮುಖಾಂತರ ತೆಗೆದುಕೊಳ್ಳುವುದು ಸೂಕ್ತ. ಇಲ್ಲದಿದ್ದರೆ ಮಲತಾಯಿ ಧೋರಣೆ ತೋರಿಸಿದ ಹಾಗೆ ಆಗುತ್ತದೆ. ಮೈಸೂರು ನಗರದ ಸುತ್ತಾ 29 ಅನ್‌ಅಥರೈಸ್ಡ್ ಕಾಲೊನೀಸ್ ಬರುತ್ತವೆ ಎಂದು ಹೇಳಿದ್ದಾರೆ. ಅದು ಎಲ್ಲೆಲ್ಲಿ ಇದೆ ಎನ್ನುವುದು ಮಾನ್ಯ ಸಚಿವರಿಂದ ತಿಳಯಬಯಸುತ್ತೇನೆ. ಇದರ ಬಗ್ಗೆ ಸರ್ಕಾರದಿಂದ ಒಂದು ಸೆಂಟ್ರಲೈಸ್ಡ್ ಪಾಲಿಸಿ ಆಗದೇ ಇದ್ದರೆ ಏನಾಗಬಹುದು? ಎನ್ನುವ ಪ್ರಶ್ನೆಯನ್ನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ :— ಮಾನ್ಯ ಅಧ್ಯಕ್ಷರೆ, ಮೈಸೂರು ನಗರಪಾಲಿಕೆ

ವ್ಯಾಪ್ತಿಗೆ ಸುಮಾರು 1,151 ಕಿ.ಮೀ. ರಸ್ತೆ ಬರುತ್ತದೆ. ಆದರಲ್ಲಿ ಕಾರ್ಪೊರೇಷನ್ ವ್ಯಾಪ್ತಿಗೆ 1090 ಕಿ.ಮೀ. ರಸ್ತೆ; ಲೋಕೋಪಯೋಗಿ ಇಲಾಖೆಗೆ 32 ಕಿ.ಮೀ. ರಸ್ತೆ; ಮತ್ತು ಯೂನಿವರ್ಸಿಟಿ ವ್ಯಾಪ್ತಿಗೆ 26 ಕಿ.ಮೀ. ರಸ್ತೆ; ಹೀಗೆ ಸುಮಾರು1,151 ಕಿ.ಮೀ. ರಸ್ತೆ ಬರುತ್ತದೆ. ಬೇರೆ ಬೇರೆ ಇಲಾಖೆಯ ವ್ಯಾಪ್ತಿಯಲ್ಲಿ ಬರತಕ್ಕಂಥ ರಸ್ತೆಗಳ ನಿರ್ವಹಣೆ ಮತ್ತು ಮೈನ್‌ಟಿನೆನ್ಸ್‌ನ್ನು ಕೂಡ ಆಯಾಯ ಇಲಾಖೆಯವರೇ ಮಾಡಬೇಕಾಗುತ್ತದೆ. ಅದು ನಮ್ಮ ಜವಾಬ್ದಾರಿ ಅಥವಾ ಕಾರ್ಪೊರೇಷನ್ ಜವಾಬ್ದಾರಿ ಅಲ್ಲ. ಅದರಲ್ಲಿಯೂ ಬಹಳ ವಿಶೇಷವಾಗಿ ಸನ್ಮಾನ್ಯ ಶಾಸಕರು ಹೇಳಿರತಕ್ಕಂಥ ರಸ್ತೆ ಅದು ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಬರುವುದರಿಂದ ಅದನ್ನು ಜಿಲ್ಲಾ ಪಂಚಾಯತ್‌ನವರೇ ನಿರ್ವಹಣೆ ಮಾಡಬೇಕಾಗುತ್ತದೆ ಮತ್ತು ಅದು ಜಿಲ್ಲಾ ಪಂಚಾಯತ್‌ನವರ ಜವಾಬ್ದಾರಿಯೂ ಕೂಡ ಆಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎ. ರಾಮದಾಸ್ :— ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಹೇಳಿದಂಥ ಉತ್ತರ ಅಕ್ಷರಶ: ಸತ್ಯ ಆದರಲ್ಲಿ ಯಾವುದೇ ತಪ್ಪು, ಇದೆಯೆಂದು ನಾನಾದರೂ ತಿಳಿದುಕೊಂಡಿಲ್ಲ. ಆದರೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುವುದಕ್ಕೆ ಮುಂಚೆ ಲೋಕೋಪಯೋಗಿ ಇಲಾಖೆಯವರನ್ನು ಒಂದು ಸಲ ಕನ್ಸಲ್ಟ್ ಮಾಡಿ ಅಕ್ಯುರೇಟ್ ಆಗಿ ಉತ್ತರ ಕೊಡಬಹುದಾಗಿತ್ತು. ಈ ಸಮಸ್ಯೆ ಕಳೆದ ಐದಾರು ವರ್ಷಗಳಿಂದ ಇದ್ದು ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಇಲ್ಲಿ ಅನಾಮಲೀಸ್ ಇದೆ, ನಗರಪಾಲಿಕೆ ಲಿಮಿಟ್‌ನಲ್ಲಿ ಬರತಕ್ಕಂಥ ರಸ್ತೆಗಳಲ್ಲಿ ಲೋಕೋಪಯೋಗಿ ಇಲಾಖೆಯವರು ನಿರ್ವಹಣೆ ಮಾಡುವಂಥ ರಸ್ತೆಗಳು ಕೂಡ ಇವೆ, ಅದಕ್ಕೆ ಸರ್ಕಾರಿ ಆಜ್ಞೆಯನ್ನು ಹೊರಡಿಸಿ ಆ ವ್ಯಾಪ್ತಿಯೊಳಗೆ ಬರುವಂಥ ಎಲ್ಲಾ ರಸ್ತೆಗಳನ್ನು ನಗರಪಾಲಿಕೆ ವಹಿಸಿಕೊಳ್ಳಲಿಕ್ಕೋಸ್ಕರವಾಗಿ ನಾನು ಕ್ರಮ ಕೈಗೊಂಡಿದ್ದೇನೆಂದು ಸನ್ಮಾನ್ಯ ಮುಖ್ಯಮಂತ್ರಿಗಳು ಕಳೆದ 6 ತಿಂಗಳ ಹಿಂದೆ ಒಂದು ಸ್ಟೇಟ್‌ಮೆಂಟ್‌ನ್ನು ಸಹ ಮಾಡಿದ್ದರು. ಆನಂತರ ಎರಡು ಬಾರಿ ಸಹ ಈ ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಹಾಗಾಗಿ, ನಗರಪಾಲಿಕೆಯೊಳಗಡೆ ಬರುವಂಥ 32 ಕಿ.ಮೀ. ಲೋಕೋಪಯೋಗಿ ಇಲಾಖೆಯ ರಸ್ತೆಯನ್ನು ಹ್ಯಾಂಡ್‌ಓವರ್ ಮಾಡುವಂಥ ಕ್ರಮ ಏನಾಗಿದೆ ಎಂಬುದನ್ನು ತಮ್ಮ ಮೂಲಕ ಕೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಹೆಚ್.ಎನ್. ಶಂಕರಲಿಂಗೇಗೌಡ :— ಮಾನ್ಯ ಅಧ್ಯಕ್ಷರೆ, ಕಳೆದ ವಾರ ನಾನು ಈ ರಸ್ತೆಗಳ ಬಗ್ಗೆ ಚರ್ಚೆ ಮಾಡಿದ್ದೆ. ರಸ್ತೆಯಲ್ಲಿ ಕುಳಿ ಇದೆಯೋ ಅಥವಾ ಕುಳಿಯಲ್ಲಿ ರಸ್ತೆ ಇದೆಯೋ ಎನ್ನುವ ಪ್ರಶ್ನೆಯನ್ನು ಕೇಳಿದ್ದೆ. ಈಗ ಎಲ್ಲವೂ ಕುಳಿಮಯವಾಗಿದೆ. ಇಂಥ ಪರಿಸ್ಥಿತಿ ರಸ್ತೆಗಳಲ್ಲಿ ಇದೆ. ಈಗ ಒಂದು ರಸ್ತೆಯನ್ನು ರಿಪೇರಿ ಮಾಡಬೇಕೆಂದು ಕೇಳಿದರೆ, ಕಾರ್ಪೊರೇಷನ್‌ನನ್ನು ಕೇಳಿದರೆ ಇದು ನಮಗೆ ಸೇರಿದ್ದಲ್ಲ, ಲೋಕೋಪಯೋಗಿ ಇಲಾಖೆಯನ್ನು ಕೇಳಿದರೆ ಇದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳುತ್ತಾರೆ. ಬಹುತೇಕ ಮುಕ್ಕಾಲು ಭಾಗದಷ್ಟು ರಸ್ತೆಗಳು ಕಾರ್ಪೊರೇಷನ್ ವ್ಯಾಪ್ತಿಗೆ ಬರುತ್ತದೆ. ಶಾಸಕರ ನಿಧಿಯಿಂದ

30 ಲಕ್ಷ ರೂಪಾಯಿಗಳನ್ನು ರಸ್ತೆ ರಿಪೇರಿಗೆಂದು ಕೊಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಆ 30 ಲಕ್ಷ ರೂಪಾಯಿಗಳು ಪೂರ್ತಿಯಾಗಿ ಲೋಕೋಪಯೋಗಿ ಇಲಾಖೆಗೆ ಹೋಗುತ್ತಿದೆ ಆ ಹಣ ಕಾರ್ಪೊರೇಷನ್‌ಗೆ ಸಿಗುತ್ತಿಲ್ಲ. ಶೇಕಡ 90ರಷ್ಟು ರಸ್ತೆಗಳು ಕಾರ್ಪೊರೇಷನ್ ವ್ಯಾಪ್ತಿಗೆ ಬರುವುದರಿಂದ ಆ ಹಣವನ್ನು ಪೂರ್ತಿಯಾಗಿ ಲೋಕೋಪಯೋಗಿ ಇಲಾಖೆಗೆ ಕೊಡುವುದಕ್ಕೆ ಬದಲಾಗಿ ಶೇಕಡ 90ರಷ್ಟು ಹಣವನ್ನು ಕಾರ್ಪೊರೇಷನ್‌ಗೆ ಮತ್ತು ಶೇಕಡ 10ರಷ್ಟು ಹಣವನ್ನು ಲೋಕೋಪಯೋಗಿ ಇಲಾಖೆಗೆ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಎನ್. ಮಹದೇವ ಪ್ರಸಾದ್:— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಗುರುಸ್ವಾಮಿ ಅವರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಮೈಸೂರು ನಗರದಲ್ಲಿ ಮೂಡಾ ರಸ್ತೆ, ಕಾರ್ಪೊರೇಷನ್ ರಸ್ತೆ, ಲೋಕೋಪಯೋಗಿ ಇಲಾಖೆಯ ರಸ್ತೆ ಮತ್ತು ಜಿಲ್ಲಾ ಪಂಚಾಯತ್ ರಸ್ತೆ ಹೀಗೆ ನಾಲ್ಕು ಇಲಾಖೆಯ ರಸ್ತೆಗಳು ನಗರ ವ್ಯಾಪ್ತಿಯಲ್ಲಿ ಇವೆ. ಯಾವುದೇ ಒಂದು ಕಾಮಗಾರಿಯನ್ನು ಅವರವರ ವ್ಯಾಪ್ತಿಯಲ್ಲಿ ಮಾತ್ರ ಅವರು ಮಾಡುತ್ತಿರುತ್ತಾರೆ. ಉದಾಹರಣೆಗೆ ಒಂದು ರಸ್ತೆಯ ಅರ್ಧ ಭಾಗ ಲೋಕೋಪಯೋಗಿ ಇಲಾಖೆಗೆ ಸೇರಿದರೆ ಇನ್ನು ಅರ್ಧ ರಸ್ತೆ ಮೂಡದವರಿಗೆ ಸೇರಿರುತ್ತದೆ. ಲೋಕೋಪಯೋಗಿ ಇಲಾಖೆಯವರು ಅರ್ಧ ರಸ್ತೆಯನ್ನು ರಿಪೇರಿ ಮಾಡಿದ ನಂತರ ಉಳಿದ ರಸ್ತೆಯನ್ನು ಮೂಡಾದವರೇ ಮಾಡಲಿ ಎಂದು ಒಂದು ಸಣ್ಣ ದುರಸ್ತಿ ಕಾರ್ಯ ಇದ್ದರೂ ಮಾಡುವುದಿಲ್ಲ. ಇದರಿಂದ ನಗರದಲ್ಲಿ ಬಹಳ ಗೊಂದಲವಾಗಿದೆ. ಇದರ ಬಗ್ಗೆ ಹಿಂದೆ ವಿಧಾನಸಭೆಯಲ್ಲಿ ಲೋಕೋಪಯೋಗಿ ಇಲಾಖೆಯ ಸಚಿವರಿಗೆ ಪ್ರಶ್ನೆ ಹಾಕಿದ್ದಾಗ ಈ ನಾಲ್ಕು ರಸ್ತೆಗಳನ್ನು ಒಂದೇ ಏಜೆನ್ಸಿ ಅಡಿಯಲ್ಲಿ ತರುವಂಥ ವ್ಯವಸ್ಥೆಯನ್ನು ಮಾಡುತ್ತೇವೆ ಎನ್ನುವ ಭರವಸೆಯನ್ನು ಕೊಟ್ಟಿದ್ದರು. ಆದ್ದರಿಂದ ಈ ನಾಲ್ಕು ಇಲಾಖೆಗೆ ರಸ್ತೆಗಳನ್ನು ರಿಪೇರಿ ಮಾಡುವುದಕ್ಕೆ ಕೊಡುವ ಹಣವನ್ನು ಒಂದೇ ಪೂಲ್ ಮಾಡಿ ಮೈಸೂರು ನಗರದಲ್ಲಿ ನಗರಪಾಲಿಕೆ ವ್ಯಾಪ್ತಿಗೆ ಬರುವಂಥ ರಸ್ತೆಗಳನ್ನು ಒಂದೇ ಏಜೆನ್ಸಿ ಮುಖಾಂತರ ಕಾಮಗಾರಿ, ರಸ್ತೆ ದುರಸ್ತಿ ಕೆಲಸ ಮಾಡಿಸಿದರೆ ಮೈಸೂರು ನಗರ ಉತ್ತಮ ರಸ್ತೆ ಹೊಂದುವುದಕ್ಕೆ ಸಾಧ್ಯವಾಗುತ್ತದೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎ.ಎನ್. ಗುರುಸ್ವಾಮಿ:— ಮಾನ್ಯ ಅಧ್ಯಕ್ಷರೆ, ಈ ರಗಳೆ ಕಳೆದ 10 ವರ್ಷಗಳಿಂದಲೂ ಹಾಗೆಯೇ ಇದೆ. ಇವರು ಮಾಡಲಿ ಎಂದು ಅವರು, ಅವರು ಮಾಡಲಿ ಎಂದು ಇವರು. ಕೊನೆಗೆ ಯಾರೂ ಕೂಡ ರಸ್ತೆ ರಿಪೇರಿ ಮಾಡುವುದಿಲ್ಲ, ಮಾಡುವುದಕ್ಕೂ ರೆಡಿ ಇಲ್ಲ. ಹೀಗಾಗಿ ಇಲ್ಲಿ ನಾವೆಲ್ಲ ಸಾರ್ವಜನಿಕರಿಂದ ಬೈಸಿಕೊಳ್ಳಬೇಕಾದ ಪರಿಸ್ಥಿತಿಯಲ್ಲಿ ಇದ್ದೇವೆ. ಆದ್ದರಿಂದ ಏನಾದರೂ ಮಾಡಿ ಇದಕ್ಕೆ ಕೊನೆ ಹಾಡುವುದಕ್ಕೆ ಒಂದೇ ಏಜೆನ್ಸಿ ಮುಖಾಂತರ ರಸ್ತೆಗಳ ರಿಪೇರಿ ಮಾಡಿಸುವುದಕ್ಕೆ ಒಂದು ಪಾಲಿಸಿಯನ್ನು ಯಾವಾಗ ತರುತ್ತೀರಿ ಎಂಬ ಪ್ರಶ್ನೆಯನ್ನು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ :— ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾಗಿರತಕ್ಕಂಥ ವಿಚಾರವನ್ನು ಮಾನ್ಯ ಸದಸ್ಯರುಗಳಾದ ಶ್ರೀ ರಾಮದಾಸ್, ಶ್ರೀ ಶಂಕರಲಿಂಗೇಗೌಡ ಮತ್ತು ಶ್ರೀ ಗುರುಸ್ವಾಮಿ ಅವರುಗಳು ಪ್ರಸ್ತಾಪ ಮಾಡಿದ್ದಾರೆ. ಯೂನಿವರ್ಸಿಟಿಗೆ ಸಂಬಂಧಿಸಿದ ರಸ್ತೆಗಳು, ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ರಸ್ತೆಗಳು ಹೀಗೆ ಬೇರೆ ಬೇರೆ ಇಲಾಖೆಯ ವ್ಯಾಪ್ತಿಯಲ್ಲಿ ಇರತಕ್ಕಂತ ಎಲ್ಲಾ ರಸ್ತೆಗಳನ್ನು ಒಂದೇ ಹಂತದಲ್ಲಿ ತರುವಂಥ ಅಂದರೆ ಕಾರ್ಪೊರೇಷನ್‌ನವರೇ ಮಾಡಿದರೆ, ಅವರಿಗೇ ವಹಿಸಿದರೆ ಒಳ್ಳೆಯದು ಎಂದು ಹೇಳಿದರು. ಇದಕ್ಕೆ ಪಾಲಿಸಿ ಡಿಸಿಷನ್ ತೆಗೆದುಕೊಳ್ಳಬೇಕಾಗುತ್ತದೆ. ಮೈಸೂರು ನಗರದಲ್ಲಿ ಸುಮಾರು 30-32 ಕಿ.ಮೀ. ರಸ್ತೆ ಲೋಕೋಪಯೋಗಿ ಇಲಾಖೆಗೆ ಸೇರಿದ್ದು ಆ ರಸ್ತೆಗಳನ್ನು ತಮ್ಮ ಇಲಾಖೆ ತೆಗೆದುಕೊಳ್ಳಬಹುದು ಎನ್ನುವ ಒಂದು ಪ್ರಸ್ತಾವನೆ ಲೋಕೋಪಯೋಗಿ ಇಲಾಖೆಯಿಂದ ಬಂದಿದೆ. ಈ ಒಂದು ಕಿ.ಮೀ. ರಸ್ತೆಯನ್ನು ನಿರ್ವಹಣೆ ಮಾಡುವುದಕ್ಕೆ ಸುಮಾರು 2 ಲಕ್ಷ ರೂಪಾಯಿಗಳಷ್ಟು ಬೇಕಾಗುತ್ತದೆ. ಆ ರೀತಿಯಾಗಿ ಬೇರೆ ಬೇರೆ ಇಲಾಖೆಗಳ ವ್ಯಾಪ್ತಿಯಲ್ಲಿ ರಸ್ತೆಗಳು ಬರುವುದರಿಂದ ಅವುಗಳನ್ನು ವಹಿಸಿಕೊಂಡಾಗ ಎಷ್ಟು ಖರ್ಚುವೆಚ್ಚಗಳು ಬೇಕಾಗುತ್ತದೆ ಮುಂತಾದವನ್ನು ಪರಿಶೀಲಿಸಬೇಕಾಗುತ್ತದೆ. ಆದ್ದರಿಂದ, ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಅವರ ಸಾನಿಧ್ಯದಲ್ಲಿ ಒಂದು ಸಭೆಯನ್ನು ಕರೆದು, ಈ ಒಂದು ನಗರಪಾಲಿಕೆಯಲ್ಲಿ ಮಾತ್ರ ಈ ಸಮಸ್ಯೆ ಇರುವುದಿಲ್ಲ, ಎಲ್ಲಾ ಪಟ್ಟಣ ಪ್ರದೇಶಗಳಲ್ಲಿ ಕೂಡ ಈ ರೀತಿಯಾದಂಥ ಸಮಸ್ಯೆ ಇರುವುದರಿಂದ ಇದರ ಬಗ್ಗೆ ಪಾಲಿಸಿ ಡಿಸಿಷನ್ ತೆಗೆದುಕೊಳ್ಳಬೇಕಾಗಿದೆ. ಅದಕ್ಕಾಗಿ ಕಾಲಾವಕಾಶ ತೆಗೆದುಕೊಂಡು ಚರ್ಚೆ ಮಾಡಿ ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತೇವೆ.

ಶ್ರೀ ಎ. ರಾಮದಾಸ್ :— ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಒಂದು ಆಶ್ವಾಸನೆಯನ್ನು ಹೊರಡಿಸುತ್ತೇವೆಂದು ಹೇಳಿದ್ದರು. ಅದು ಏನಾಯಿತೆಂದು ಹೇಳಬೇಕು.

ಅಧ್ಯಕ್ಷರು :— ಇದರ ಬಗ್ಗೆ ಚರ್ಚೆ ಮಾಡಿ ತಕ್ಕ ಕಾರ್ಯಕ್ರಮ ಏನು ಕೈಗೊಳ್ಳಬೇಕೋ ಅದನ್ನು ಕೈಗೊಳ್ಳುತ್ತೇವೆಂದು ಸಂಬಂಧಪಟ್ಟ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಎ. ರಾಮದಾಸ್ :— ಮಾನ್ಯ ಅಧ್ಯಕ್ಷರೆ, ಏಕೆಂದರೆ ಈಗ ನಗರಪಾಲಿಕೆ ಜ್ಯುರಿಸ್‌ಡಿಕ್ಷನ್‌ನ್ನು ಅನೌನ್ಸ್ ಮಾಡುತ್ತಿದ್ದಾರೆ. ಅದಕ್ಕೆ ಮೊದಲು ಇದು ಆಗಬೇಕು. ಅದಕ್ಕೋಸ್ಕರ ಇದನ್ನು ಮಾಡಬೇಕೆಂದು ಮಾನ್ಯ ಸಭಾನಾಯಕರನ್ನು ನಾನು ಕೇಳುತ್ತಿದ್ದೇನೆ. ಇದನ್ನು ಈಗ ಸರಿಪಡಿಸದಿದ್ದರೆ, ಹಾಗೆಯೇ ಬಿಟ್ಟರೆ ಪುನ: ಐದು ವರ್ಷಗಳ ಕಾಲ ಸಮಸ್ಯೆಯಾಗುತ್ತದೆ. ಅದಕ್ಕೋಸ್ಕರ ಹೇಳುತ್ತಿದ್ದೇನೆ.